ಫಾರಸ್ಸುಗಳನ್ನು ಮಾಡಲು ಒಂದು ಫೈನಾನ್ಸ್ ಕಮೀಷನನ್ನು ನಾವು ನೇಮಕ ಮಾಡಲಿದ್ದೇವೆ. ಮೇ ೧೦ರೊಳಗೆ ಅದನ್ನು ನಾವು ನೇಮಕ ಮಾಡಬೇಕಾಗುತ್ತದೆ. ನಮ್ಮ ಕಾನೂನು ಏನಿದೆ ಕರ್ನಾಟಕ ಪಂಚಾಯಿತಿ ಆಕ್ಟ್ ೧೯೯೩, ಅದು ಮೇ ೧೦ನೇ ತಾರೀಖು ೧೯೯೩ರಂದು ಬಂತು. ಆದ್ದರಿಂದ ನಾವು ೯ಳನೇ ಮೇ ೧೦ಕ್ಕೆ ಮುಂಚಿತವಾಗಿ ಈ ಫೈನಾನ್ಸ್ ಕಮೀಷನನ್ನು ಕೂಡ ನೇಮಕ ಮಾಡುತ್ತೇವೆ. ಈ ಎಲ್ಲಾ ವಿಷಯಗಳನ್ನು ಸಮಗ್ರವಾಗಿ ಅಭ್ಯಾಸ ಮಾಡಿದರೆ ಅವುಗಳ ಹಣಕಾಸಿನ ಪರಿಸ್ಥಿತಿಯನ್ನು ಬಲಪಡಿಸಲು ಸಹಾಯವಾಗುತ್ತದೆ.

ಶ್ರೀ ವಿಜಯಕುಮಾರ್ ಶೆಟ್ಟಿ.—ನೀರಿನ ಸರಬರಾಜು ವ್ಯವಸ್ಥೆ ಬಹಳ ಕಡಿಮೆಯಾಗಿದೆ. ಆದ್ದರಿಂದ ಪ್ರತಿಯೊಂದು ಗ್ರಾಮ ಪಂಚಾಯಿತಿಗೂ ೫–೫ ಬೋರ್‌ವೆಲ್‌ಗಳನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ.—ಜನಸಂಖ್ಯೆಯ ಆಧಾರದಮೇಲೆ ಅನುದಾನವನ್ನು ನೀಡುವ ವ್ಯವಸ್ಥೆ ಮಾಡಿದರೆ ಬಹಳ ಚೆನ್ನಾಗಿರುತ್ತದೆ. ದೊಡ್ಡ ಪಂಚಾಯಿತಿಗಳಿಗೂ ೧ ಲಕ್ಷ ರೂ. ಕಡಿಮೆ ಜನಸಂಖ್ಯೆ ಇರತಕ್ಕ ಪಂಚಾಯಿತಿಗಳಿಗೂ ೧ ಲಕ್ಷ ರೂ. ಎಂದು ಮಾಡಿರುವುದರಿಂದ ದೊಡ್ಡ ಪಂಚಾಯಿತಿಗಳಲ್ಲಿ ದೈನಂದಿನ ಕಾರ್ಯನಿರ್ವಹಣೆಗೆ ತೊಂದರೆಯಾಗುತ್ತಿದೆ. ಇದನ್ನು ಪುನರ್ ವಿಮರ್ಶೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಂಡಲ ಪಂಚಾಯಿತಿಯ ಸ್ಯಾಫ್ಟಿಂಗ್ ಪ್ಯಾಟರ್ನ್‌ನಲ್ಲಿ ಸ್ವಲ್ಪ ಮಟ್ಟಿಗೆ ತೊಂದರೆ ಇದೆ. ಅತಿ ಅಮೂಲ್ಯವಾದ ಸೇವೆಯನ್ನು ಸಲ್ಲಿಸುವ ಪೌರಕಾರ್ಮಿಕರ ಹುದ್ದೆಗಳು ಬಿಟ್ಟುಹೋಗಿವೆ. ಸ್ಯಾಫ್ಟಿಂಗ್ ಪ್ಯಾಟರ್ನ್‌ನಲ್ಲಿ ಇದನ್ನೂ ಸೇರಿಸ ಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ.—ತಮಗೆ ಗೊತ್ತಿರುವಂತೆ ಹಳೇ ಮಂಡಲ ಪಂಚಾಯತಿಗಳಲ್ಲಿ ಸುಮಾರು ೧೭ ಸಾವಿರ ಜನರನ್ನು ಬೇರೆ ಬೇರೆ ಕೆಲಸಗಳಿಗಾಗಿ ಅಕ್ರಮವಾಗಿ ನೇಮಕಾತಿ ಮಾಡಿ ಕೊಂಡಿದ್ದರು. ಅದನ್ನೆಲ್ಲಾ ನಾವು ಈಗ ಸಕ್ರಮಗೊಳಿಸಿದ್ದೇವೆ. ಅಂದರೆ ಯಾವ ಯಾವ ಪಂಚಾಯಿತಿಗಳಲ್ಲಿ ಎಷ್ಟೆಷ್ಟು ಸಿಬ್ಬಂದಿ ವರ್ಗ ಇರಬೇಕು, ಯಾವ ಯಾವ ವರ್ಗಕ್ಕೆ ಸೇರಿದವರು ಎಷ್ಟೆಷ್ಟು ಇರಬೇಕು, ಅವರ ವಿದ್ಯಾರ್ಹತೆ ಮತ್ತು ಪರಿಷ್ಕೃತ ಸಂಬಳ ಸಾರಿಗೆಗಳು ಎಷ್ಟೆಷ್ಟು ಇರಬೇಕೆಂಬುದನ್ನು ನಾವು ನಿಗದಿ ಮಾಡಿದ್ದೇವೆ. ಇದರ ಬಗ್ಗೆ ಒಂದು ಆರ್ಡರನ್ನು ತರುವುದಕ್ಕೆ ಪ್ರಯತ್ನ ನಡೆಸುತ್ತಿದ್ದೇವೆ. ಪಂಚಾಯಿತಿಗೆ ಬರತಕ್ಕ ಆದಾಯವೆಲ್ಲಾ ಕೇವಲ ಸಿಬ್ಬಂದಿ ವರ್ಗಕ್ಕೇ ಖರ್ಚಾಗಬಾರದು, ಹಾಗೆ ಖರ್ಚಾದರೆ ಏನೂ ಪ್ರಯೋಜನವಾಗುವುದಿಲ್ಲವೆಂದು ನಮ್ಮ ಉದ್ದೇಶವಾಗಿದೆ. ಆದ್ದರಿಂದ, ಹಿಂದೆ ಏನು ತಪ್ಪಾಗಿತ್ತು, ಅದನ್ನು ಸರಿಪಡಿಸುವುದಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಇದರ ಬಗ್ಗೆ ಮಾನ್ಯ ಸದಸ್ಯರಿಗೆ ಯಾವುದೇ ಅನುಮಾನವೂ ಬೇಡವೆಂದು ಹೇಳಬಯಸುತ್ತೇನೆ.

ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆ

೩೧೨(೭೫೫) ಶ್ರೀ ಬಸವಂತರೆಡ್ಡಿ ದೋತಕಪಲ್ಲಿ (ಸೇಡಂ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಖಿಲ್ಲೆಮ್, ಅಳ್ಳಳ್ಳಿ, ಕಿಷ್ಟಾಪುರ, ತೊಲಮಾಮಿಡಿ, ಹೊಸಹಳ್ಳಿ, ನೀಲಹಳ್ಳಿ ಗ್ರಾಮಗಳಿಗೆ ಪ್ರತಿವರ್ಷ ಕುಡಿಯುವ ನೀರಿನ ತೊಂದರೆ ಉಂಟಾಗುವುದು ನಿಜವೇ?

(ಆ) ಆ ಗ್ರಾಮಗಳಲ್ಲಿ ಕುಡಿಯುವ ನೀರಿನ ಯೋಜನೆಗಳು ಮಂಜೂರಾಗಿ ೩–೪ ವರ್ಷ ಗಳಾದರೂ ಸಹ ನೀರು ಸರಬರಾಜು ಇಲ್ಲದೇ ಇರುವುದರಿಂದ ನಾಗರೀಕರಿಗೆ ತೊಂದರೆಯಾಗಿ ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳಾಗಿಯೇ ಉಳಿದಿರುವುದು ನಿಜವೇ?

(ಇ) ಈ ಮಾರ್ಚ್ ಒಳಗಾಗಿ ಈ ಗ್ರಾಮಗಳ ನಾಗರೀಕರಿಗೆ ಯಾವುದೇ ನೆಪವಿಲ್ಲದೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬಹುದೇ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಸಂಚಾಯತ್ ರಾಜ್ ಸಚಿವರು),—

(ಅ) ಹೌದು.

(ಆ) ಈ ಗ್ರಾಮಗಳಲ್ಲಿ ಕೊರೆದ ಜಲಮೂಲಗಳು ಬತ್ತಿ ಹೋಗಿರುವುದರಿಂದ ಈ ಗ್ರಾಮಗಳು ಸಮಸ್ಯಾತ್ಮಕ ಗ್ರಾಮಗಳಾಗಿವೆ.

(ಇ) ಕೆಳಗಿನಂತೆ ಯೋಜನೆಗಳನ್ನು ಮುಂಗಿಸಲು ಯೋಚಿಸಲಾಗಿದೆ.

ಖಿಲ್ಕಮ್, ಅಳ್ಳಳ್ಳಿ : ಡಿಸೆಂಬರ್ ೧೯೯೪.

ಕಿಷ್ಟಾಪುರ : ಜೂನ್ ೧೯೯೪.

ತೊಲಮಾಮ್ಮಿಡಿ : ಜುಲೈ ೧೯೯೪.

ಹೊಸ ಹಳ್ಳಿ, ನೀಲಹಳ್ಳಿ : ಏಪ್ರಿಲ್ ೧೯೯೪.

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ.—ಮಾನ್ಯ ಅಧ್ಯಕ್ಷರೆ, ನನ್ನ ಕಳೆದ ೪ ವರ್ಷಗಳ ಅವಧಿಯಲ್ಲಿ ಪ್ರತಿವರ್ಷ ಎರಡು ಸಾರಿಯಾದರೂ ಈ ಸದನದಲ್ಲಿ ಖಿಲ್ಕಮ್, ಅಳ್ಳಳ್ಳಿ, ಕಿಷ್ಟಾಪುರ, ತೊಲಮಾಮಿಡಿ, ಹೊಸಹಳ್ಳಿ, ನೀಲಹಳ್ಳಿ ಗ್ರಾಮಗಳ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವಂತೆ ಕೇಳಿದರೆ ಇದೇ ಉತ್ತರ ಸಿಕ್ಕುತ್ತಿದೆ. ಜಲಮಟ್ಟ ಸಿಕ್ಕುವುದಿಲ್ಲ, ಜಲ ಮೂಲಗಳು ಬತ್ತಿ ಹೋಗಿವೆ, ಆದ್ದರಿಂದ ಇವು ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳಾಗಿವೆ ಎಂದು ತಿಳಿಸುತ್ತಾ ಬರುವುದಾದರೆ ಈ ಸಮಸ್ಯೆಗಳನ್ನು ಬಗೆಹರಿಸುವುದು ಯಾವಾಗ? ಈ ಗ್ರಾಮಗಳಿಗೆ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆ ಮಾಡುವುದು ಸರ್ಕಾರದ ಕರ್ತವ್ಯವಲ್ಲವೇ? ಬಂದು ಬೇಳೆ ನೀರು ಸರಬರಾಜು ಮಾಡುವ ದೃಷ್ಟಿ ಕೋನವಿದ್ದರೆ ಪ್ರತಿಸಾರಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ವಿಫಲವಾಗುವ ಬದಲು ಯಾವ ಭಾಗದಲ್ಲಿ ನೀರಿನ ಮಟ್ಟ ಸಿಕ್ಕುತ್ತದೆ, ಆ ಜಾಗದಿಂದ ಫೈಪುಗಳಲ್ಲಿ ಶಾಶ್ವತ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದು?

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೆ, ಈ ೪ ಹಳ್ಳಿಗಳಲ್ಲಿ ನಾವು ಪ್ರಯತ್ನವನ್ನು ಮಾಡಿದ್ದೇವೆ. ಆಥವಾ ಇಲ್ಲ ಎಂಬ ಪ್ರಶ್ನೆ ಇಲ್ಲ. ಖಿಲ್ಕಮ್ ಮತ್ತು ಅಳ್ಳಳ್ಳಿ ಇವುಗಳಲ್ಲಿ ಒಂದು ಕಡೆ ೨ ಬೋರ್‌ವೆಲ್‌ಗಳು ಇವೆ, ಇನ್ನೊಂದು ಕಡೆ ಕೂಡ ಎರಡು ಬೋರ್‌ವೆಲ್‌ಗಳಿವೆ. ಆದರೆ ಅವು ಫೇಲ್ ಆಗಿರುವುದರಿಂದ ನಾವು ಹೊಸ ಬೋರ್‌ವೆಲ್‌ಗಳನ್ನು ಕೊರೆಯಬೇಕಾಗಿದೆ. ನೀರನ್ನು ಹುಡುಕುವ ಪ್ರಯತ್ನ ನಡೆದಿದೆ, ನಮ್ಮ ಲೆಕ್ಕದ ಪ್ರಕಾರ ಖಿಲ್ಕಮ್ ಮತ್ತು ಅಳ್ಳಳ್ಳಿ ಗ್ರಾಮಗಳಿಗೆ ಡಿಸೆಂಬರ್‌ನೊಳಗೆ ಹೊಸ ಬೋರ್‌ವೆಲ್‌ಗಳನ್ನು ಹಾಕಿ ನೀರನ್ನು ಕೊಡುವ ಪ್ರಯತ್ನ ಮಾಡುತ್ತೇವೆ, ಕಿಷ್ಟಾಪುರಕ್ಕೆ ಜೂನ್ ೯೪ ಮತ್ತು ತೊಲಮಾಮಿಡಿಗೆ ಕೂಡ ಏಪ್ರಿಲ್ ೯೪ ರೊಳಗೆ ನೀರನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ಎಲ್ಲ ೪ ಹಳ್ಳಿಗಳಲ್ಲೂ ಬೋರ್‌ವೆಲ್‌ಗಳಿಲ್ಲವೆಂದಲ್ಲ, ೨-೩-೪ ಬೋರ್‌ವೆಲ್‌ಗಳನ್ನು ಹಾಕಿದ್ದಾರೆ. ಬೇಸಿಗೆ ಬಂದಾಗ ನೀರಿನ ಮಟ್ಟ ಕಡಿಮೆಯಾಗುತ್ತದೆ, ಅನಂತರ ನಾವು ಹೊಸ ಪಾಯಿಂಟ್‌ಗಳನ್ನು ಹುಡುಕಬೆ ಕಾಗುತ್ತದೆ. ಅನಂತರ ಅದನ್ನು ಆಗ್ಮೆಂಟ್ ಮಾಡಬೇಕಾಗುತ್ತದೆ. ಈ ಪ್ರಯತ್ನ ಸತತವಾಗಿ ನಡೆಯುತ್ತಿರುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ನಮ್ಮ ಮಾಹಿತಿಯ ಪ್ರಕಾರ ಈ ವರ್ಷದ ಡಿಸೆಂಬರ್‌ನೊಳಗೆ ೨ ಹಳ್ಳಿಗಳಿಗೆ ನೀರನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇನ್ನೊಂದು ಹಳ್ಳಿಗೆ ಜೂನ್ ಮತ್ತು ಮತ್ತೊಂದು ಹಳ್ಳಿಗೆ ಜುಲೈ ತಿಂಗಳಲ್ಲಿ ನೀರನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಹೊಸ ಹಳ್ಳಿ ಮತ್ತು ನೀಲ ಹಳ್ಳಿಗೆ ಇದೇ ವರ್ಷದ ಏಪ್ರಿಲ್ ತಿಂಗಳಲಿ ನೀರನ್ನು ಹೆಚ್ಚಿಸುವ ವ್ಯವಸ್ಥೆ ಮಾಡಲಾಗುತ್ತದೆ. ನೀರಿನ ಅಭಾವ ಸಂಪೂರ್ಣವಾಗಿ ಇದ್ದೇಯೆಂದು ಅಲ್ಲ. ಈಗಿರತಕ್ಕ ವ್ಯವಸ್ಥೆಯ ಪ್ರಕಾರ ತಲಾ ಪ್ರಮಾಣ ೨೦-೨೫ ಲೀಟರ್ ನೀರನ್ನು ಕೊಡುತ್ತಿದ್ದೇವೆ. ಇದು ಸಾಲುವುದಿಲ್ಲ. ನೀರಿನ ಮಟ್ಟ ಕಡಿಮೆಯಾಗುತ್ತಿರುವುದರಿಂದ ಇದನ್ನು ಆಗ್ಮೆಂಟ್ ಮಾಡಬೇಕು ಇಲ್ಲವೇ ಬೋರ್‌ವೆಲ್ ಕೊರೆಯಬೇಕು ಎಂದು ಹೇಳುತ್ತಿದ್ದಾರೆ, ನಮ್ಮ ಉದ್ದೇಶ ಕೂಡ ಇದೇ ಈ ದಿಸೆಯಲ್ಲಿ ಸರ್ವಪ್ರಯತ್ನವನ್ನೂ ನಾವು ಮಾಡುತ್ತಿದ್ದೇವೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ.—ಈ ಗ್ರಾಮಗಳಲ್ಲಿ ಮಳೆಗಾಲದಲ್ಲಿಯೂ ಕೂಡ ನೀರಿನ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆಪ್ಪೇ ಅಲ್ಲ ೧–೨ ಕಿ.ಮೀ. ದೂರದಪರೆಗೆ ಈ ಗ್ರಾಮಸ್ಥರು ಹೋಗಿ ನೀರನ್ನು ತರುತ್ತಿದ್ದಾರೆ. ಖಿಲಕಂ ಗ್ರಾಮದಲ್ಲಿ ನೀರಿನ ಮಟ್ಟವೇ ಸಿಕ್ಕಿಲ್ಲ. ಕಳೆದ ೪ ವರ್ಷದಿಂದ ನೀರನ್ನು ಹುಡುಕಾಡುತ್ತಿದ್ದಾರೆ. ಇದಕ್ಕೆ ಬದಲಾಗಿ ಯಾವ ಭಾಗದಲ್ಲಿ ನೀರು ಸಿಗುತ್ತದೆಂಬುದನ್ನು ನೋಡಿ ಅಲ್ಲಿಂದ ಪೈಪುಗಳನ್ನು ಎಳೆದು ನೀರನ್ನು ಏತಕ್ಕೆ ಸರಬರಾಜು ಮಾಡಬಾರದು ? ಈ ಯೋಜನೆಯನ್ನು ಡಿಸೆಂಬರ್ ಅಂತ್ಯದೊಳಗೆ ಪೂರೈಸುತ್ತೇವೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಆದರೆ ಪ್ರತಿವರ್ಷವೂ ನಾನು ಕೇಳುತ್ತಿರುವ ಪ್ರಶ್ನೆಗೆ ಇದೇ ಉತ್ತರ ಸಿಕ್ಕುತ್ತಿದೆ. ಬರುತ್ತಿರುವ ಬೇಸಿಗೆಯಲ್ಲಿ ಈ ಗ್ರಾಮಗಳಿಗೆ ನೀರಿನ ಬವಣೆಯನ್ನು ನಿಗಿಸಲು ತಕ್ಷಣ ಅಂದರೆ ಇನ್ನು ೫–೬ ದಿನಗಳಲ್ಲಿ ವಾಹನಗಳ ಮುಖಾಂತರ ನೀರನ್ನು ಸರಬರಾಜು ಮಾಡಿ ಈ ಗ್ರಾಮಸ್ಥರಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇನೆ.

ಶ್ರೀ ಎಂ. ವೈ ಘೋರ್ಪಡೆ.—ಮಾನ್ಯ ಅಧ್ಯಕ್ಷರೇ, ೨ ಹಳ್ಳಿಗಳಿಗೆ ಸಂಬಂಧಪಟ್ಟ ವಿವರಗಳನ್ನು ಕೊಟ್ಟರೆ, ಈ ಪ್ರಶ್ನೆಗಳನ್ನು ಕೇಳುವುದಕ್ಕೆ ಅನುಕೂಲವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ನೀಲಹಳ್ಳಿಯಲ್ಲಿರುವ ಜನಸಂಖ್ಯೆ ೭೮೫. ಅಲಿಳಿ ಬೋರ್‌ವೆಲ್‌ಗಳು, ಒಂದು ಮಿನಿವಾಟರ್ ಸಪ್ಲೈ ಸ್ಕೀಂ ಇದೆ. ತಲಾ ಪ್ರಮಾಣ ೫೦ ಲೀಟರ್ ನೀರನ್ನು ನಮ್ಮ ಲೆಕ್ಕದ ಪ್ರಕಾರ ಕೊಡುವುದಕ್ಕೆ ಸಾಧ್ಯವಿದೆ. ಇದರ ಜೊತೆಗೆ ಇನ್ನೂ ಒಂದು ಪೈಪ್ಡ್ ವಾಟರ್ ಸ್ಕೀಂನ್ನೂ ಕೂಡ ಮಾಡುತ್ತಿದ್ದೇವೆ. ಈ ಪೈಪ್ಡ್ ವಾಟರ್ ಸ್ಕೀಂನಲ್ಲಿ ಬೇಸಿಗೆಯಲ್ಲಿ ನೀರು ಕಡಿಮೆಯಾಗುತ್ತದೆ. ಆದ್ದರಿಂದ ಇದರ ಜೊತೆಗೆ ಇನ್ನೂ ಒಂದು ಸೋರ್ಸ್‌ನ್ನು ಹುಡುಕುವ ಪ್ರಯತ್ನವನ್ನು ನಮ್ಮ ಇಂಜಿನಿಯರ್‌ಗಳು ಮಾಡಿ ಒಂದು ಬೋರ್‌ವೆಲ್ ಗನ್ನು ಹುಡುಕುತ್ತಿದ್ದಾರೆ. ಅದು ೪ ಕಿ.ಮೀ. ದೂರದಲ್ಲಿದೆ, ಅದರಲ್ಲಿ ೧೧,೭೨೦ ಲೀಟರ್ ಪರ್ ಹೆಡ್ ಸಿಕ್ಕುತ್ತಿದೆ. ಅಲ್ಲಿಂದ ಪೈಪ್ ಹಾಕುವ ಕೆಲಸವನ್ನು ಸಧ್ಯದಲ್ಲಿ ಮಾಡುತ್ತಿದ್ದಾರೆ. ಆದ್ದರಿಂದ ಏಪ್ರಿಲ್ ತಿಂಗಳೊಳಗೆ ಇನ್ನೂ ಹೆಚ್ಚಿನ ಪೈಪ್ ವಾಟರ್‌ನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಹೇಳಿದ್ದುದು. ಹೊಸಹಳ್ಳಿಯಲ್ಲೂ ಕೂಡ ಇದೇ ಪರಿಸ್ಥಿತಿ ಇದೆ ಈಗ ೨೫ ಲೀಟರ್ ಪರ್‌ಹೆಡ್ ಕೊಡುವ ೩ ಬೋರ್‌ವೆಲ್‌ಗಳಿವೆ. ಒಂದು ಮಿನಿವಾಟರ್ ಸಪ್ಲೈ ಸ್ಕೀಂ ಕೂಡ ಇದೆ. ಅದರೂ ಕೂಡ ಬೇಸಿಗೆಯಲ್ಲಿ ನೀರಿಗೆ ತೊಂದರೆಯಾಗುತ್ತದೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲೂ ಕೂಡ ಹೊಸ ಸೋರ್ಸ್‌ಸ್ ಹುಡುಕುವ ಪ್ರಯತ್ನದಲ್ಲಿ ನಾವು ಯಶಸ್ವಿಯಾಗಿದ್ದೇವೆ. ಇದೂ ಕೂಡ ೪ ಕಿ.ಮೀ. ದೂರದಲ್ಲಿ ೧೧,೭೨೦ ಲೀಟರ್ ಪರ್ ಹೆಡ್‌ನ ಒಂದು ಸೋರ್ಸ್ ಸಿಕ್ಕಿದೆ. ಇದರ ಪೈಪ್‌ಲೈನ್ ಕೆಲಸವನ್ನು ಜೆ. ಆರ್. ವೈ ಯೋಜನೆಯ ಅಡಿಯಲ್ಲಿ ಹಾಕುವ ಕೆಲಸಮಾಡುತ್ತಿದ್ದಾರೆ. ಇದೂ ಕೂಡ ಇದೇ ವರ್ಷದ ಏಪ್ರಿಲ್ ತಿಂಗಳೊಳಗೆ ನೀರನ್ನು ಕೊಡುತ್ತೇವೆಂದು ಹೇಳಿದ್ದೇವೆ. ಇನ್ನೂ ಎರಡು ಕಡೆಗಳಲ್ಲಿ ನೀರನ್ನು ಕೊಡುವ ಯೋಜನೆ ಇದೆ. ಅದು ಬಹುಶಃ ಜೂನ್ ಅಥವಾ ಜುಲೈ ತಿಂಗಳಲ್ಲಿ ಆಗಬಹುದು. ಈಗ ನಾವು ನೀರನ್ನು ಕೊಟ್ಟಿದ್ದೇವೆ, ಕೊಡುತ್ತಿದ್ದೇವೆ, ಇನ್ನೂ ಹೆಚ್ಚಿನ ನೀರನ್ನು ಕೊಡಲು ಪ್ರಯತ್ನ ಮಾಡುತ್ತಿದ್ದೇವೆ. ಯಾವುದೇ ಸರ್ಕಾರವೂ ಕೂಡ ಇದಕ್ಕಿಂತ ಹೆಚ್ಚಿನ ಪ್ರಯತ್ನವನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ.—ಹೊಸಹಳ್ಳಿ, ಖಿಲ್‌ಕಂ, ಕೃಷ್ಣಾಪುರ್, ತೊಲಮಾಮಿಡಿ ಈ ಗ್ರಾಮಗಳಲ್ಲಿ ನೀರಿನ ವ್ಯವಸ್ಥೆ ಇಲ್ಲವೇ ಇಲ್ಲ. ಸ್ನಾನಕ್ಕೆ ಕುಡಿಯುವುದಕ್ಕೆ ನೀರಿಲ್ಲದೆ ೧–೨ ಕಿ.ಮೀ. ದೂರದಿಂದ ಆ ಗ್ರಾಮಸ್ಥರು ನೀರನ್ನು ತರುತ್ತಿದ್ದಾರೆ. ತಾವು ಬೇಕಾದರೆ ಸಂಬಂಧಪಟ್ಟವರಿಂದ ವರದಿಯನ್ನು ತರಿಸಿಕೊಳ್ಳಿ. ಆದ್ದರಿಂದ ಈಗ ಕೂಡಲೇ ಅಲ್ಲಿಗೆ ವಾಹನಗಳ ಮೂಲಕ ನೀರನ್ನೊದಗಿಸುವ ವ್ಯವಸ್ಥೆ ಮಾಡಲೇಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ತಾವು ವರದಿಯನ್ನು ತರಿಸಿಕೊಂಡು ಕೂಡಲೇ ಈ ಗ್ರಾಮಗಳಿಗೆ ನೀರಿನ ವ್ಯವಸ್ಥೆ ಮಾಡಿ. ಈ ಜನರು ನೀಲಹಳ್ಳಿ ಗ್ರಾಮದ ಸಮೀಪಕ್ಕೆ ಬಂದು ನೀರನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಇದೇ ಪ್ರಕಾರ ಕೃಷ್ಣಾಪುರ, ತೊಲಮಾಮಿಡಿ, ಅಳ್ಳಳ್ಳಿ ಜನ ಕೂಡ ತೊಂದರೆ ಪಡುತ್ತಿದ್ದಾರೆ.

ಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ.—ಕಿಷ್ಣಾಪುರ ಎಂದು ಹೇಳಿದಲ್ಲಾ, ಅಲ್ಲಿಯೂ ಕೂಡ ನೀರು ಇದೆ ಆದರೆ ಒಬ್ಬರು ಪೈಪೈಟ್‌ನವರು ಸಪ್ಲೈಮಾಡುತ್ತಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ೩–೪ ಹಳ್ಳಿಗಳಿಗೆ ತಕ್ಷಣ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳುತ್ತಿದ್ದಾರೆ, ತಾವು ಆ ವ್ಯವಸ್ಥೆಯನ್ನು ಮಾಡಲು ಕ್ರಮ ಕೈಗೊಳ್ಳಿ.